# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

## ಅಕ್ಟೋಬರ್ ೦೩, ೨೦೧೮ರ ಬುಧವಾರದಂದು ನಡೆದ ಕಾರ್ಯಕಾರಿ ಸಮಿತಿ ೧೯೭ನೇ ಸಭೆಯ ಪರಿಷ್ಕೃತ ನಡವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಡಾ. ಎ. ಸುಬ್ಬಣ್ಣ ರೈ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೩. ಡಾ. ಸ.ಚಿ.ರಮೇಶ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೪. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೦೭. ಡಾ. ಮಂಜುನಾಥ ಬೇವಿನಕಟ್ಟಿ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೧೦.೦೮.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೬ನೇ ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು (ಅನುಬಂಧ-೦೧).

**ನಿರ್ಣಯ** : ದಿನಾಂಕ ೧೦.೦೮.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೬ನೇ ಸಭೆಯ ನಡವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಸಭೆ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೧೦.೦೮.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೬ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು (ಅನುಬಂಧ-೦೨).

**ನಿರ್ಣಯ** : ದಿನಾಂಕ ೧೦.೦೮.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೬ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಸಭೆ ಅನುಮೋದನೆ ನೀಡಿತು.

**೧೯೭. ೦೧** ದಿನಾಂಕ ೦೪.೦೯.೨೦೧೮ರಂದು ಕಾರ್ಯನಿರ್ವಾಹಕ ನಿರ್ದೇಶಕರು ಶ್ರೀ ಅಟಲ್ ಬಿಹಾರಿ ವಾಜಪೇಯಿ ಮೃಗಾಲಯ, ಕಮಲಾಪುರ ಇವರು ತುಂಗಭದ್ರಾ ಪವರ್ ಕೆನಾಲ್‌ನಿಂದ ನೀರು ತೆಗೆದುಕೊಳ್ಳುವ ಕುರಿತಂತೆ ವಿಶ್ವವಿದ್ಯಾಲಯದ ಆವರಣದಲ್ಲಿ ಜಾಕ್‌ವೆಲ್ ನಿರ್ಮಾಣ ಮತ್ತು ಪೈಪ್‌ಲೈನ್ ಅಳವಡಿಸಲು ಕೋರಿರುವ ಮನವಿ ಬಗ್ಗೆ.

**ನಿರ್ಣಯ** : ವಿಶ್ವವಿದ್ಯಾಲಯದ ಯಾವ ಯಾವ ವಿಭಾಗಗಳ ಮುಂದೆ ನೀರನ್ನು ತೆಗೆದುಕೊಂಡು ಹೋಗಲಾಗುತ್ತದೆಯೋ ಅಂತಹ ವಿಭಾಗಗಳಿಗೆ/ಕಟ್ಟಡಗಳಿಗೆ ನೀರಿನ ಸೌಲಭ್ಯವನ್ನು ನೀಡುವ ಷರತ್ತಿಗೊಳಪಡಿಸಿ ಅನುಮತಿಯನ್ನು ನೀಡಲು ಸಭೆ ಅನುಮೋದನೆ ನೀಡಿತು.

**೧೯೭. ೦೨** ಮಾನ್ಯ ಕುಲಪತಿಯವರ ಆದೇಶ ಸಂಖ್ಯೆ ಕವಿಹಂ/ಕುಪ/ಕುಸನೇ/೨೦೧೮-೧೯/೨೪೯ ಸೆಪ್ಟೆಂಬರ್ ೧೫, ೨೦೧೮ರನ್ವಯ ಡಾ. ಮಂಜುನಾಥ ಬೇವಿನಕಟ್ಟಿ, ಪ್ರಾಧ್ಯಾಪಕರು, ಜಾನಪದ ಅಧ್ಯಯನ ವಿಭಾಗ ಇವರನ್ನು ಕಾರ್ಯಕಾರಿ ಸಮಿತಿ ಅನುಮೋದನೆ ನಿರೀಕ್ಷಿಸಿ ಕುಲಸಚಿವರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆ ಕೋರಿದೆ.

**ನಿರ್ಣಯ** : ಡಾ. ಮಂಜುನಾಥ ಬೇವಿನಕಟ್ಟಿ, ಪ್ರಾಧ್ಯಾಪಕರು, ಜಾನಪದ ಅಧ್ಯಯನ ವಿಭಾಗ ಇವರನ್ನು ಕುಲಸಚಿವರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಸಭೆ ಅನುಮೋದನೆ ನೀಡಿತು.

೧೯೭. ೦೩ ಕುಲಸಚಿವರ ಆದೇಶ ಸಂಖ್ಯೆ:ಕವಿಹಂ:ಕುಸ:ಸವಿನಿ.ಡೀನೇ. ೨೦೧೮-೧೯, ಸೆಪ್ಟೆಂಬರ್ ೨೫, ೨೦೧೮ರನ್ವಯ ಡಾ. ಸ.ಚಿ. ರಮೇಶ್, ಪ್ರಾಧ್ಯಾಪಕರು, ಜಾನಪದ ಅಧ್ಯಯನ ವಿಭಾಗ ಇವರನ್ನು ಕಾರ್ಯಕಾರಿ ಸಮಿತಿ ಅನುಮೋದನೆ ನಿರೀಕ್ಷಿಸಿ ಸಮಾಜ ವಿಜ್ಞಾನಗಳ ನಿಕಾಯದ ಡೀನ್‌ರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆ ಕೋರಿದೆ.

**ನಿರ್ಣಯ :** ಡಾ. ಸ.ಚಿ. ರಮೇಶ್, ಪ್ರಾಧ್ಯಾಪಕರು, ಜಾನಪದ ಅಧ್ಯಯನ ವಿಭಾಗ ಇವರನ್ನು ಸಮಾಜ ವಿಜ್ಞಾನಗಳ ನಿಕಾಯದ ಡೀನ್‌ರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಸಭೆ ಅನುಮೋದನೆ ನೀಡಿತು.

೧೯೭. ೦೪ ಕುಲಸಚಿವರ ಆದೇಶ ಸಂಖ್ಯೆ.ಕವಿಹಂ:ಕುಸ:ಚಿವಿನಿ:ನಿಯೋಜನೆ:೨೦೧೮-೧೯, ಸೆಪ್ಟೆಂಬರ್ ೨೫, ೨೦೧೮ರನ್ವಯ ಡಾ. ಮಲ್ಲಿಕಾರ್ಜುನ ವಣೆನೂರು, ಸಹಾಯಕ ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಇವರನ್ನು ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ನಿರ್ದೇಶಕರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆ ಕೋರಿದೆ.

**ನಿರ್ಣಯ :** ಡಾ. ಮಲ್ಲಿಕಾರ್ಜುನ ವಣೆನೂರು, ಸಹಾಯಕ ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಇವರನ್ನು ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ನಿರ್ದೇಶಕರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಸಭೆ ಅನುಮೋದನೆ ನೀಡಿತು.

೧೯೭. ೦೫ ದಿನಾಂಕ ೩೦.೦೮.೨೦೧೮ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಖರೀದಿ ಸಮಿತಿ ಸಭೆ ನಡೆವಳಿಗಳಿಗೆ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೧೯೭. ೦೬ ದಿನಾಂಕ ೨೫.೦೯.೨೦೧೮ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ವಿಶ್ವವಿದ್ಯಾಲಯದ ನೂತನ ಮಹಿಳಾ ವಸತಿ ನಿಲಯ ನಿರ್ವಹಣೆ ಕುರಿತ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೧೯೭. ೦೭ ೨೦೧೭-೧೮ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಕುರಿತು ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

**ನಿರ್ಣಯ :** ಕನ್ನಡ ವಿಶ್ವವಿದ್ಯಾಲಯದ ೨೦೧೭-೧೮ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿ ಅನುಮೋದನೆ ನೀಡಿತು.

೧೯೭. ೦೮ ಕನ್ನಡ ವಿಶ್ವವಿದ್ಯಾಲಯದ ೨೭ನೇ ನುಡಿಹಬ್ಬ/ ಘಟಿಕೋತ್ಸವದ ನಾಡೋಜ ಆಯ್ಕೆ ಸಮಿತಿ ಸದಸ್ಯರ ಹಾಗೂ ನುಡಿಹಬ್ಬದ ಭಾಷಣ ಮಾಡಲು ಮುಖ್ಯ ಅತಿಥಿಗಳ ನಾಮನಿರ್ದೇಶನ ಕುರಿತು.

**ನಿರ್ಣಯ :** ಕನ್ನಡ ವಿಶ್ವವಿದ್ಯಾಲಯದ ೨೭ನೇ ನುಡಿಹಬ್ಬ/ ಘಟಿಕೋತ್ಸವದ ನಾಡೋಜ ಆಯ್ಕೆ ಸಮಿತಿ ಸದಸ್ಯರ ಹಾಗೂ ನುಡಿಹಬ್ಬದ ಭಾಷಣ ಮಾಡಲು ಮುಖ್ಯ ಅತಿಥಿಗಳ ನಾಮನಿರ್ದೇಶನ ಮಾಡುವ ಕುರಿತು ತೀರ್ಮಾನ ಕೈಗೊಳ್ಳಲು ಮಾನ್ಯ ಕುಲಪತಿಗಳ ವಿವೇಚನೆಗೆ ಬಿಡಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

೧೯೭. ೦೯ ಕನ್ನಡ ವಿಶ್ವವಿದ್ಯಾಲಯದ ೨೭ನೇ ನುಡಿಹಬ್ಬ/ ಘಟಿಕೋತ್ಸವ ನಡೆಸಲು ಹಾಗೂ ಘನತೆವೆತ್ತ ರಾಜ್ಯಪಾಲರ ದಿನಾಂಕ ನಿಗದಿ ಕುರಿತು.

**ನಿರ್ಣಯ :** ಕನ್ನಡ ವಿಶ್ವವಿದ್ಯಾಲಯದ ೨೭ನೇ ನುಡಿಹಬ್ಬ/ ಘಟಿಕೋತ್ಸವ ನಡೆಸಲು ಹಾಗೂ ಘನತೆವೆತ್ತ ರಾಜ್ಯಪಾಲರ ದಿನಾಂಕ ನಿಗದಿ ಕುರಿತಂತೆ ತೀರ್ಮಾನ ಕೈಗೊಳ್ಳಲು ಮಾನ್ಯ ಕುಲಪತಿಗಳ ವಿವೇಚನೆಗೆ ಬಿಡಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೧೯೭. ೧೦ ನಿರ್ದೇಶಕರು, ಪ್ರಸಾರಾಂಗ ಇವರ ಪ್ರಸ್ತಾವನೆ.

೧೮೮ನೇ ಕಾರ್ಯಕಾರಿ ಸಮಿತಿ ನಿರ್ಣಯದಂತೆ ಕನ್ನಡ ವಿಶ್ವವಿದ್ಯಾಲಯದ ೨೫ನೇ ವರ್ಷದ ಬೆಳ್ಳಿಹಬ್ಬದ ನಿಮಿತ್ತ ಪುಸ್ತಕ ಪ್ರಕಟಣೆಗಳ ಮುದ್ರಣವನ್ನು ಹಾಗೂ ಇತರೆ ನಿರ್ವಹಣೆ ಸರಬರಾಜು ಕೆಲಸಗಳನ್ನು ಒಂದು ಕೋಟಿ ರೂಗಳಿಗೆ ಮೀರದಂತೆ ಎಂಸಿ & ಎ ಸಂಸ್ಥೆಗೆ ನೀಡಲಾಗಿತ್ತು. ಈ ಮಿತಿಯು ಮೀರುತ್ತಿರುವ ಹಿನ್ನೆಲೆಯಲ್ಲಿ ಮುಂದಿನ ಪ್ರಕಟಣೆಗಳನ್ನು ಸದರಿ ಸಂಸ್ಥೆಗೆ ನೀಡಲು ಮತ್ತೆ ಒಂದು ಕೋಟಿ ರೂಗಳಿಗೆ ಮೀರದಂತೆ ಮುದ್ರಣ ಕಾರ್ಯವನ್ನು ಕೈಗೊಳ್ಳಲು ಕಾರ್ಯಕಾರಿ ಸಮಿತಿ ಅನುಮಮೋದನೆ ಕೋರಿದೆ.

**ನಿರ್ಣಯ :** ಈ ಕುರಿತು ಸಭೆಯ ಪರಿಶೀಲಿಸಿ ಪುಸ್ತಕ ಪ್ರಕಟಣೆಗಳ ಮುದ್ರಣವನ್ನು ಹಾಗೂ ಇತರೆ ನಿರ್ವಹಣೆ ಸರಬರಾಜು ಕೆಲಸಗಳನ್ನು ಒಂದು ಕೋಟಿ ರೂಗಳಿಗೆ ಮೀರದಂತೆ ಎಂಸಿ & ಎ ಸಂಸ್ಥೆಗೆ ನೀಡಲು ಸಭೆ ಅನುಮೋದನೆ ನೀಡಿತು.

೧೯೭. ೧೧ ಸ್ನಾತಕೋತ್ತರ ಡಿಪ್ಲೊಮಾ **ಯೋಗ ಅಧ್ಯಯನ** ಕೇಂದ್ರ ಸ್ಥಾಪನೆ ಹಾಗೂ ಪದವಿ ಕೋರ್ಸ್‌ನ ನಿಯಮಾವಳಿ ಮತ್ತು ಪಠ್ಯಕ್ರಮಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಈ ವಿಷಯವನ್ನು ಸಭೆಯು ಪರಿಶೀಲಿಸಿ ಸ್ನಾತಕೋತ್ತರ ಡಿಪ್ಲೊಮಾ **ಯೋಗ ಅಧ್ಯಯನ** ಕೇಂದ್ರ ಸ್ಥಾಪನೆಗೆ ಹಾಗೂ ಪದವಿ ಕೋರ್ಸ್‌ನ ನಿಯಮಾವಳಿ ಮತ್ತು ಪಠ್ಯಕ್ರಮಗಳಿಗೆ ಸಭೆ ಅನುಮೋದನೆ ನೀಡತು.

೧೯೭. ೧೨ ಕನ್ನಡ ಸಾಹಿತ್ಯ ಪರಿಷತ್ತು ದಿನಾಂಕ ೫ ಮತ್ತು ೦೬-೧೦-೨೦೧೮ರ ವರೆಗೆ ಬಹರೇನ್‌ನಲ್ಲಿ ಆಯೋಜಿಸಿರುವ ಪ್ರಥಮ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಕನ್ನಡ ವಿಶ್ವವಿದ್ಯಾಲಯದ ಸಾಹಿತಿಗಳು, ವಿದ್ವಾಂಸರು ಹಾಗೂ ಅಧಿಕಾರಿಗಳ ವಿವರಗಳ ಕುರಿತು.

ನಿರ್ಣಯ : ಬಹರೇನ್‌ನಲ್ಲಿ ಆಯೋಜಿಸಿರುವ ಪ್ರಥಮ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಕನ್ನಡ ವಿಶ್ವವಿದ್ಯಾಲಯದ ಸಾಹಿತಿಗಳು, ವಿದ್ವಾಂಸರು ಹಾಗೂ ಅಧಿಕಾರಿಗಳ ಪಟ್ಟಿಗೆ ಸಭೆ ಅನುಮೋದನೆ ನೀಡಿತು.

೧೯೭. ೧೩ **ಅಧ್ಯಯನಾಂಗದ ಈ ಕೆಳಗಿನ ಪ್ರಸ್ತಾವನೆಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.**

೧. ದಿನಾಂಕ ೧೭.೦೪.೨೦೧೮ರಂದು ನಡೆದ ಅಧ್ಯಯನ ವಿಭಾಗಗಳ ಮುಖ್ಯಸ್ಥರ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ. **(ಅನುಬಂಧ-೧)**

೨. ದಿನಾಂಕ ೧೬.೦೮.೨೦೧೮ರಂದು ನಡೆದ ಅಧ್ಯಯನ ವಿಭಾಗಗಳ ಮುಖ್ಯಸ್ಥರು ಹಾಗೂ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ. **(ಅನುಬಂಧ-೨)**

೩. ದಿನಾಂಕ ೨೫.೦೮.೨೦೧೮ರಂದು ನಡೆದ ಅಧ್ಯಯನ ವಿಭಾಗಗಳ ಮುಖ್ಯಸ್ಥರು ಹಾಗೂ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ. **(ಅನುಬಂಧ-೩)**

೪. ದಿನಾಂಕ ೨೦.೦೯.೨೦೧೮ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ. **(ಅನುಬಂಧ-೪)**

೫. ೨೦೧೮-೧೯ನೇ ಸಾಲಿನ ವಿವಿಧ ಅಧ್ಯಯನ ವಿಭಾಗಗಳ ಮತ್ತು ಮಾನ್ಯತಾ ಸಂಸ್ಥೆಗಳಲ್ಲಿ ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿ/ಬಾಹ್ಯ ಮಾರ್ಗದರ್ಶಕರನ್ನಾಗಿ ನಿಯೋಜಿಸಲು (ಒಟ್ಟು ೬೧ ಜನರ)ಪಟ್ಟಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ. **(ಅನುಬಂಧ-೫)**

೬. ಅಧ್ಯಯನಾಂಗದ ೨೦೧೮-೧೯ನೇ ಸಾಲಿನ ಪಿಎಚ್.ಡಿ. ಪ್ರವೇಶದ ಮೂರು ನಿಕಾಯಗಳ ಎಲ್ಲ ಅಧ್ಯಯನ ವಿಭಾಗಗಳ ಮತ್ತು ವಿಸ್ತರಣಾ ಕೇಂದ್ರ ಹಾಗೂ ಎಲ್ಲ ಮಾನ್ಯತಾ ಕೇಂದ್ರಗಳ ಒಟ್ಟು ೫೩೪ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲು ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.**(ಅನುಬಂಧ-೬)**

ನಿರ್ಣಯ : ಅಧ್ಯಯನಾಂಗದ ಈ ಮೇಲಿನ ಎಲ್ಲ ವಿಷಯಗಳ ಕುರಿತು ಸಭೆಯು ಪರಿಶೀಲಿ ಕ್ರಸಂ.೧ರಿಂದ ೫ರ ವರೆಗಿನ ವಿಷಯಗಳಿಗೆ ಅನುಮೋದನೆ ನೀಡಿತು ಹಾಗೂ ಕ್ರಸಂ.೬ರ ಫಲಿತಾಂಶವನ್ನು ಪರಿಷ್ಕರಿಸಿ ಪ್ರಕಟಿಸಲು ಸಭೆ ಅನುಮೋದನೆ ನೀಡಿತು.

೧೯೭. ೧೪ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮಂಜೂರಾತಿ ಕುರಿತು.

ನಿರ್ಣಯ : ಸದ್ಯದ ಮಟ್ಟಿಗೆ ಪ್ರತಿ ವಿದ್ಯಾರ್ಥಿಗೆ ೧೦,೦೦೦/-ರೂ ಮಾತ್ರಗಳ ಶಿಷ್ಯವೇತನವನ್ನು ನೀಡಲು ಸಭೆ ಅನುಮೋದನೆ ನೀಡಿತು.

೧೯೭. ೧೫ ದಿನಾಂಕ ೨೭-೦೮-೨೦೧೮ರಂದು ನಡೆದ ಮಾನ್ಯ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆ ಪರಿಶೀಲಿಸಿ ಅನುಮೋದನೆ ನೀಡಿತು.

೧೯೭. ೧೬ ತಾತ್ಕಾಲಿಕ ಅಧ್ಯಾಪಕರ ವೇತನ ಪರಿಷ್ಕರಣೆ ಕುರಿತಂತೆ ಸಮಿತಿಯನ್ನು ರಚಿಸುವ ಕುರಿತು.

ನಿರ್ಣಯ : ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಅಧ್ಯಾಪಕರ ವೇತನವನ್ನು ಪರಿಷ್ಕರಿಸಲು ನಾಲ್ಕು ನಿಕಾಯಗಳ ಡೀನ್‌ರು, ಹಣಕಾಸು ಅಧಿಕಾರಿಗಳು ಹಾಗೂ ಕುಲಸಚಿವರನ್ನೊಳಗೊಂಡ ಸಮಿತಿಯನ್ನು ರಚಿಸಲು ಸಭೆ ನಿರ್ಣಯಿಸಿತು.

೧೯೭. ೧೭ ಬಹರೇನ್ ಮತ್ತು ದುಬೈ ಕನ್ನಡಿಗರಿಗೆ ಕನ್ನಡ ಸರ್ಟಿಫಿಕ್ ಕೋರ್ಸ್ ಆರಂಭಿಸುವ ಕುರಿತು.

ನಿರ್ಣಯ : ಈ ಕುರಿತು ಪರಿಶೀಲಿಸಿದ ಸಭೆಯು ಬಹರೇನ್ ಮತ್ತು ದುಬೈ ಕನ್ನಡ ಸಂಘ ಇವರ ಸಹಯೋಗದೊಂದಿಗೆ ಚರ್ಚಿಸಿ ಕನ್ನಡ ಸರ್ಟಿಫಿಕ್ ಕೋರ್ಸ್ ಆರಂಭಿಸಲು ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೧೯೭. ೧೮ ಸಹ ಪ್ರಾಧ್ಯಾಪಕರಾದ ಡಾ.ಎಸ್.ವೈ. ಸೋಮಶೇಖರ್, ಡಾ.ಎಲ್. ಶ್ರೀನಿವಾಸ, ಡಾ.ಮಲ್ಲಿಕಾರ್ಜುನ ವಣೇನೂರು, ಡಾ.ಸುಚೇತ ನವರತ್ನ ಹಾಗೂ ಡಾ.ತಾರೀಹಳ್ಳಿ ಹನುಮಂತಪ್ಪ ಅವರ ಸಿಎಎಸ್ ಮನವಿ ಕುರಿತು.

ನಿರ್ಣಯ : ಸದರಿ ಸಹ ಪ್ರಾಧ್ಯಾಪಕರ ಮನವಿಯನ್ನು ಸಭೆಯು ಪರಿಶೀಲಿಸಿ ಸಿಎಎಸ್ ಪ್ರಕ್ರಿಯೆಯನ್ನು ಆರಂಭಿಸಲು ಅನುಮೋದನೆ ನೀಡಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು